ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್ ಎನ್ ಎಸ್ - 19

4ನೇ ವರ್ಷ 30ನೇ ಸಂಚಿಕೆ ಕೊಪ್ಪ 30-3-1986 ಭಾನುವಾರ ಬೆಲೆ 40 ಪೈಸೆ

ಕ್ರೀಡಾ ಶಾಲೆ, ಕ್ರೀಡಾ ನಿಲಯ, ಕ್ರೀಡಾ ವಿಭಾಗಕ್ಕೆ
1986-87ನೇ ಸಾಲಿಗೆ ಪ್ರವೇಶಕ್ಕೆ ಅರ್ಜಿ ಆಹ್ವಾನ

ಚಿಕ್ಕಮಗಳೂರು : ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯು ವಿವಿಧ ಜಿಲ್ಲೆಗಳಲ್ಲಿರುವ ಕ್ರೀಡಾ ನಿಲಯ ಮತ್ತು ಕ್ರೀಡಾ ವಿಭಾಗಗಳಿಗೆ ಹಾಗೂ ಕೊಡಗು ಜಿಲ್ಲೆಯ ಕೂಡಿಗೆಯಲ್ಲಿರುವ ಕ್ರೀಡಾ ಶಾಲೆಗೆ 1986–87ನೇ ಸಾಲಿನ ಪ್ರವೇಶಕ್ಕಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಕರೆದಿದೆ. ಕ್ರೀಡಾ ನಿಲಯಕ್ಕೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು 1-6-86ರಂದು 16 ರಿಂದ 19 ವರ್ಷಕ್ಕೊಳಪಟ್ಟಿರಬೇಕು. ಕ್ರೀಡಾ ಶಾಲೆ ಮತ್ತು ಕ್ರೀಡಾ ವಿಭಾಗಕ್ಕೆ ಅರ್ಜಿ ಸಲ್ಲಿಸುವವರು 1-6-86ರಂದು 15 ವರ್ಷಕ್ಕೊಳಪಟ್ಟಿರಬೇಕು.

ಚಿಕ್ಕಮಗಳೂರು ಜಿಲ್ಲಾ ಮಟ್ಟದ ಆಯ್ಕೆ ದಿನಾಂಕ 5-5-1986ರಂದು ಬೆಳಿಗ್ಗೆ 9 ಗಂಟೆಯಿಂದ ಜಿಲ್ಲಾ ಕ್ರೀಡಾ ಮೈದಾನದಲ್ಲಿ ನಡೆಯುವುದು. ಇದರಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ರಾಜ್ಯಮಟ್ಟದ ಆಯ್ಕೆಯಲ್ಲಿ ಭಾಗವಹಿಸಬೇಕು.

ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಳಿಗಾಗಿ ಜಿಲ್ಲಾ ಯುವಜನ ಸೇವಾ ಮತ್ತು ಕ್ರೀಡಾಧಿಕಾರಿ, ಜಿಲ್ಲಾ ಕ್ರೀಡಾ ಮೈದಾನ, ಚಿಕ್ಕಮಗಳೂರು ಇವರನ್ನಾಗಲೀ ಅಥವಾ ಜಿಲ್ಲಾ ತರಬೇತಿದಾರರನ್ನಾಗಲೀ ಅಥವಾ ಆಯಾ ತಾಲ್ಲೂಕಿನ ಸಹಾಯಕ ಯುವಜನ ಸೇವಾಧಿಕಾರಿಗಳನ್ನಾಗಲೀ ಭೇಟಿ ಮಾಡಬಹುದು.

ಜಿಲ್ಲಾ ಮಟ್ಟದ ಆಯ್ಕೆಗೆ ಅರ್ಜಿಗಳನ್ನು ಸ್ವೀಕರಿಸಲು ಕಡೆಯ ದಿನಾಂಕ 30.4.86

ಶೃಂಗೇರಿಯಲ್ಲಿ
ಪು. ತಿ. ನ. ವಿಚಾರ ಸಂಕಿರಣ

ಶೃಂಗೇರಿ: ಸಾಹಿತ್ಯ ಅಕಾಡೆಮಿ ಮತ್ತು ಇಲ್ಲಿನ ಶೃಂಗಶ್ರೀ ಸಾಹಿತ್ಯ ಸಂಘಗಳ ಸಂಯುಕ್ತ ಆಶ್ರಯದಲ್ಲಿ ಮಾ. 23ರಂದು ಪು.ತಿ.ನ. ಅವರ ಸಾಹಿತ್ಯದ ಬಗೆಗೆ ವಿಚಾರ ಸಂಕಿರಣ ಮತ್ತು ಕವಿಗೋಷ್ಠಿ ನಡೆಯಿತು

ಕೆ.ಎಸ್. ಬಾಲಕೃಷ್ಣ ಕಾರ್ಯಕ್ರಮ ಉದ್ಘಾಟಿಸಿದರು. ಜೆ.ಸಿ.ಬಿ.ಎಂ. ಕಾಲೇಜು ಉಪನ್ಯಾಸಕ ಎ.ಕೆ. ಭಟ್ ಅಧ್ಯಕ್ಷತೆ ವಹಿಸಿದ್ದರು.

ಸಮಾರೋಪ ಸಮಾರಂಭ ತಹಸೀಲ್ದಾರ್ ಪ್ರಭಾಕರ ಶರ್ಮ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಜೆ.ಸಿ.ಬಿ.ಎಂ. ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಹೆಚ್.ಎಲ್. ಸುಬ್ರಮಣ್ಯ ಸಮಾರೋಪ ಭಾಷಣ ಮಾಡಿದರು.

ಶೃಂಗೇರಿಯಲ್ಲಿ ಬ್ಯಾಂಕಿಂಗ್ ಕಮ್ಮಟ

ಶೃಂಗೇರಿ: ಬೆಂಗಳೂರಿನ "ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳ ಸಮನ್ವಯ ಸಮಿತಿ"ಯು ಕನ್ನಡದಲ್ಲಿ ಹಣ ಮತ್ತು ಬ್ಯಾಂಕಿಂಗ್ ವಿಷಯಗಳಲ್ಲಿ ಆಸಕ್ತರಿಗೆ ಮಾರ್ಗದರ್ಶನ ನೀಡುವ ದೃಷ್ಟಿಯಿಂದ ವರ್ಷದಲ್ಲಿ ಎರಡು ಬಾರಿ ನಡೆಸುತ್ತಿರುವ 'ಬ್ಯಾಂಕಿಂಗ್ ಕಮ್ಮಟ'ವನ್ನು (ಅಧ್ಯಯನ ಶಿಬಿರ) ಈ ಬಾರಿ ಶೃಂಗೇರಿಯಲ್ಲಿ ಏಪ್ರಿಲ್ 20ರಿಂದ 24ರವರೆಗೆ ನಡೆಸಲಿದೆ.

ಕರ್ನಾಟಕದ ಇತರ ಕ್ಷೇತ್ರಗಳಂತೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕೂಡಾ ಇಂದಲ್ಲ ನಾಳೆ ಕನ್ನಡವೇ ಎಲ್ಲ ವ್ಯವಹಾರಗಳ ಮಾಧ್ಯಮವಾಗಬೇಕು. ಗ್ರಾಹಕರ ಖಾತೆಗಳ ತೆರೆಯುವಿಕೆ ಹಾಗೂ ನಿರ್ವಹಣೆ, ಹಣದ ಜಮಾ, ಚೆಕ್ಕು ಲೇಖನ, ಸಾಲಗಳ ಹಾಗೂ ವಸೂಲಿ, ಮುಂಗಡ ನೀಡಿಕೆ, ಅಭಿವೃದ್ಧಿ ಕಾರ್ಯಕ್ಕಾಗಿ ನೆರವು, ಹಿಂದುಳಿದ ವರ್ಗಗಳ ಮುನ್ನಡೆ, ಸಮಾಜಕಲ್ಯಾಣ–ಮುಂತಾದ ಎಲ್ಲವೂ ಜನಗಳ ಭಾಷೆಯಾದ ಕನ್ನಡದ ಮೂಲಕವೇ ನಡೆಯಬೇಕು. ಕನ್ನಡದ ಮೂಲಕವೇ ನಡೆಯಬೇಕು. ಕನ್ನಡದ ನಮೂನೆಗಳಿಂದಲೇ ಇದೆಲ್ಲ ಆಗಬೇಕು. ಅಲ್ಲದೆ, ಬ್ಯಾಂಕಿಂಗ್ ಕುರಿತ ಚಿಂತನೆ ಅಭಿವ್ಯಕ್ತಿಗಳೂ ಕನ್ನಡದಲ್ಲೇ ನಡೆದರೆ ಚೆನ್ನ. ಬ್ಯಾಂಕುಗಳು ಇಂದು ಸರ್ವ–ವ್ಯಾಪಿಯಾಗುತ್ತಿವೆ. ಅವುಗಳ ಕಲಾಪಗಳೂ ಬಹುಮುಖವಾಗಿ ಬೆಳೆಯುತ್ತಿವೆ. ಜೊತೆಗೆ ಅವು ಹೆಚ್ಚು ಸಂಕೀರ್ಣವೂ ಆಗುತ್ತಿವೆ. ಹೊಸ ಹೊಸ ಪರಿಕಲ್ಪನೆಗಳೂ ಮೂಡುತ್ತಿವೆ. ಇದನ್ನೆಲ್ಲ ಕುರಿತ ಚಿಂತನೆ, ಸಂಶೋಧನೆ, ವಿಚಾರವಿನಿಮಯ, ಪ್ರಚಾರ–ಎಲ್ಲವೂ ಇಲ್ಲಿಯ ಭಾಷೆಯಲ್ಲಿಯೇ ನಡೆಯಬೇಕು.

ಹೀಗೆ ವ್ಯವಹಾರ, ಚಿಂತನೆ, ಅಭಿವ್ಯಕ್ತಿ ಈ ಮೂರು ಮುಖಗಳಲ್ಲಿ ಕನ್ನಡವನ್ನು ಬಳಕೆಗೆ ತರಲು ಅಗತ್ಯವಾದ ಅಸ್ತಿವಾರವನ್ನು ನಿರ್ಮಿಸುವ ಸಲುವಾಗಿ ಕನ್ನಡವನ್ನು ಈ ನಿಟ್ಟಿನಲ್ಲಿ ಬಳಸಬಲ್ಲ ಸಮರ್ಥರ ತಂಡವೊಂದನ್ನು ಕಟ್ಟುವ ಪ್ರಯತ್ನವಾಗಿ ಈ ಕಮ್ಮಟಗಳನ್ನು ಏರ್ಪಡಿಸಲಾಗುತ್ತಿದೆ.

ಇದರಲ್ಲಿ ಕನ್ನಡಾಸಕ್ತ ಬ್ಯಾಂಕ್ ಉದ್ಯೋಗಿಗಳೆಲ್ಲ ಭಾಗವಹಿಸ ಬಹುದು. ಒಮ್ಮೆ ಭಾಗವಹಿಸಿದವರು ಮತ್ತೊಮ್ಮೆ ಭಾಗವಹಿಸ ಬಾರದೆಂದಿಲ್ಲ. ಭಾಗವಹಿಸ ಬಯಸುವವರು ಸಮನ್ವಯ ಸಮಿತಿ, ಭಾರತೀಯ ಸ್ಟೇಟ್ ಬ್ಯಾಂಕ್, 22, ಜಯ ಚಾಮರಾಜೇಂದ್ರ ರಸ್ತೆ, ಬೆಂಗಳೂರು—2 ಈ ವಿಳಾಸವನ್ನು ಸಂಪರ್ಕಿಸ ಬಹುದು.

ಜಮೀನು ನೀರಿನ ವಿವಾದದಲ್ಲಿ ಕೊಲೆ ಪ್ರಕರಣ:
'ತುಂಗಾವಾರ್ತೆ' ಸಂಪಾದಕ ನ್ಯಾ|| ಕಸ್ಟಡಿಗೆ

ಕೊಪ್ಪ: ಇಲ್ಲಿಗೆ ಸಮೀಪದ ಸೂರ್ಯದೇವಸ್ಥಾನದ ಬಳಿಯ ವಾದಲಗದ್ದೆ ಎಂಬಲ್ಲಿ ಜಮೀನು ನೀರಿನ ವಿವಾದದಲ್ಲಿ ಶೀನಶೆಟ್ಟಿ ಎಂಬುವರ ಕೊಲೆಯಾಗಿದ್ದು, ಈ ಸಂಬಂಧವಾಗಿ ತೀರ್ಥಹಳ್ಳಿಯ 'ತುಂಗಾವಾರ್ತೆ' ಸಂಪಾದಕ ಡಿ. ಎಸ್. ವಿಶ್ವನಾಥಶೆಟ್ಟಿ ಎಂಬ ವ್ಯಕ್ತಿಯನ್ನು ಬಂಧಿಸಿ, ನ್ಯಾಯಾಂಗ ಬಂಧನದಲ್ಲಿಡಲಾಗಿದೆ.

ಮಾ. 23ರ ರಾತ್ರಿ ನಡೆದ ಈ ಪ್ರಕರಣದಲ್ಲಿ, ಕೊಪ್ಪದಲ್ಲಿ ಹಿಂದೆ ಬಸ್ ಏಜೆಂಟ್ ಆಗಿದ್ದ ಸಾಧುಶೆಟ್ಟಿ ವೃದ್ಧ ಶೀನಶೆಟ್ಟಿಯವರ ತಲೆಗೆ ಬಡಿಗೆಯಿಂದ ಹೊಡೆದಾಗ ಅವರು ಕೆಳಗೆ ಬಿದ್ದರೆಂದೂ, ಕೂಡಲೇ ಅವರನ್ನು ಕೊಪ್ಪದ ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ತೀರ್ಥಹಳ್ಳಿ, ಶಿವಮೊಗ್ಗ ಆಸ್ಪತ್ರೆಗಳಿಗೆ ಒಯ್ದು ಅನಂತರ ಮಾ. 25ರ ಸಂಜೆ ಮಣಿಪಾಲಕ್ಕೆ ಒಯ್ಯುತ್ತಿದ್ದಾಗ ಆಗುಂಬೆಯಲ್ಲಿ ಅತ ಕೊನೆಯುಸಿರೆಳೆದರೆನ್ನಲಾಗಿದೆ.

ಸಾವಿಗೆ ಮುನ್ನ ಅವರು ನೀಡಿರುವ ಹೇಳಿಕೆಯಲ್ಲಿ ವಿಶ್ವನಾಥಶೆಟ್ಟಿ, ಎಲ್. ಚಂದ್ರು, ಶಂಕರ, ಶಂಕರಪ್ಪ ಇವರುಗಳ ಕುಮ್ಮಕ್ಕಿನಿಂದ ಸಾಧುಶೆಟ್ಟಿ ತನ್ನ ಮೇಲೆ ಹಲ್ಲೆ ನಡೆಸಿದ್ದಾಗಿ ಅವರು ತಿಳಿಸಿರುವರೆನ್ನಲಾಗಿದ್ದು, ಅವರ ಮಗ ನೀಡಿರುವ ದೂರಿನ ಮೇರೆಗೆ ಕೊಪ್ಪ ಪೋಲೀಸರು ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಮಾ. 26ರಂದು ವಿಶ್ವನಾಥಶೆಟ್ಟಿಯವರನ್ನು ಬಂಧಿಸಿ, ನ್ಯಾಯಾಲಯದಿಂದ ಪೋಲೀಸ್ ಕಸ್ಟಡಿಗೆ ಒಳಪಡಿಸಿದ್ದು, ಮಾ. 29ರಂದು ಆತನನ್ನು ನ್ಯಾಯಾಧೀಶರು ನ್ಯಾಯಾಂಗ ಬಂಧನಕ್ಕೆ ಒಳಪಡಿಸಿದ್ದಾರೆನ್ನಲಾಗಿದೆ.

ಕೊಲೆ ಆರೋಪಿ ಸಾಧುಶೆಟ್ಟಿ ನಾಪತ್ತೆಯಾಗಿದ್ದು ಬೊಂಬಾಯಿಗೆ ತಲೆ ತಪ್ಪಿಸಿಕೊಂಡು ಹೋಗಿದ್ದಾರೆನ್ನಲಾಗಿದೆ. ಉಳಿದ ಆರೋಪಿಗಳೂ ಪತ್ತೆಯಾಗಿಲ್ಲ.

ಇನ್‌ಚಾರ್ಜ್ ಡಿ ವೈ ಎಸ್ಪಿ ಕೆಂಪೇಗೌಡ, ಎಸ್ಪಿ ಎಸ್. ಎಸ್. ಪಾವಟೆ ಕಾರ್ಯಸ್ಥಳಕ್ಕೆ ಭೇಟಿ ನೀಡಿದ್ದರು.

ಸಂಘಟನೆಯ ಗುರಿ, ಮಾರ್ಗ, ಸಿದ್ಧಾಂತಗಳ ನಿರೂಪಣೆಗಾಗಿ
ದಲಿತ ಸಂಘರ್ಷ ಸಮಿತಿ ಅಧ್ಯಯನ ಶಿಬಿರ

ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರ ರಾಜ್ಯ ಮಟ್ಟದ ಅಧ್ಯಯನ ಶಿಬಿರವೊಂದು ಕೆಮ್ಮಣ್ಣುಗುಂಡಿಯಲ್ಲಿ ಮಾ. 22 ರಿಂದ 26 ರ ವರೆಗೆ ನಡೆಯಿತು.

ತನ್ನ ಈವರೆಗಿನ 10 ವರ್ಷಗಳ ಅಸ್ತಿತ್ವದಲ್ಲಿ ದಲಿತರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಅಭಿವೃದ್ಧಿಗಾಗಿ ಉಚಿತವಾದ ಹಲವು ಹೋರಾಟಗಳನ್ನು ನಡೆಸುತ್ತ, ಇಂದು ರಾಜ್ಯದ ಎಲ್ಲಾ 20 ಜಿಲ್ಲೆಗಳಲ್ಲೂ ವ್ಯಾಪಿಸಿರುವ ದಲಿತ ಸಂಘರ್ಷ ಸಮಿತಿ ತನ್ನ ಗುರಿಯ ಬಗೆಗಿನ ಅಸ್ಪಷ್ಟ ಚಿತ್ರಣವನ್ನು ನಿಖರಗೊಳಿಸಿಕೊಂಡು, ಅದಕ್ಕೆ ತುಳಿಯಬೇಕಾದ ಮಾರ್ಗವನ್ನೂ, ತನ್ನ ಗುರಿ–ಮಾರ್ಗಗಳ ತಳಹದಿಯಾಗುವ ಸಿದ್ಧಾಂತವನ್ನೂ ಸ್ಪಷ್ಟಗೊಳಿಸಿಕೊಳ್ಳುವ ಯತ್ನವಾಗಿ ಈ ಶಿಬಿರ ಏರ್ಪಡಿಸಲಾಗಿತ್ತು.

ಶಾಲಾ ಮಕ್ಕಳಿಗೊಂದು ಅನರ್ಥಕರ ಮೇಲ್ಪಂಕ್ತಿ:
ಮುಖ್ಯೋಪಾಧ್ಯಾಯ-ಅಧ್ಯಾಪಕಿ ಚಕಮಕಿ

ಉತ್ತಮೇಶ್ವರ: ಇಲ್ಲಿನ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಈಚೆಗೆ ಮುಖ್ಯೋಪಾಧ್ಯಾಯ ಬಿ. ರಂಗಪ್ಪ ಅವರಿಗೂ ಅಧ್ಯಾಪಕಿ ಕು|| ತುಳಸಮ್ಮ ಎಂಬವರಿಗೂ ಚಕಮಕಿ ನಡೆದ ದುರದೃಷ್ಟಕರ ಪ್ರಕರಣವೊಂದರ ಬಗ್ಗೆ ಪೋಲೀಸ್ ಮತ್ತು ಇಲಾಖಾ ತನಿಖೆ ನಡೆದಿರುವುದಾಗಿ ಹೇಳಲಾಗಿದೆ.

ಚಕಮಕಿಯ ವೇಳೆ ಮುಖ್ಯೋಪಾಧ್ಯಾಯರು ತಮ್ಮ ಮೇಲೆ ಕೈ ಮಾಡಿದ್ದಾಗಿ ಅಧ್ಯಾಪಕಿ ದೂರಿದ್ದರೆ, ಆಕೆ ಪರೀಕ್ಷಾ ಕೊಠಡಿ ಬಿಟ್ಟು ಬಂದ ಬಗ್ಗೆ ಎ.ಇ.ಒ.ಗೆ ರಿಪೋರ್ಟ್ ಮಾಡುವುದಾಗಿ ಹೇಳಿದ್ದಕ್ಕೆ ಮಕ್ಕಳ ಚಪ್ಪಲಿಗಳನ್ನೆತ್ತಿ ತನ್ನತ್ತ ತೂರಿದರೆಂದೂ ಅದರಿಂದ ತಪ್ಪಿಸಿ ಕೊಳ್ಳಲು ಬಾಗಿಲು ಹಾಕಿದಾಗ ಅವರ ಕೈಗೆ ಸ್ವಲ್ಪ ತಗುಲಿ ಬಳೆ ಒಡೆಯಿತೆಂದೂ ಮು. ಉ. ಹೇಳಿದ್ದಾರೆನ್ನಲಾಗಿದೆ.

ವಾತಾವರಣ ತಿಳಿಗೊಳಿಸುವುದಕ್ಕಾಗಿ ಸದರಿ ಅಧ್ಯಾಪಕಿಯನ್ನು ಆಕೆಗೆ ಅನುಕೂಲಕರವಾಗಿ ಲೋಕನಾಥಪುರ ಶಾಲೆಗೆ ಡೆಪ್ಯೂಟ್ ಮಾಡಿದ್ದು, ಜಗಳಾಡಿದ ಬಗ್ಗೆ ಇಬ್ಬರ ವಿರುದ್ಧವೂ ಇಲಾಖಾ ಶಿಸ್ತು ಕ್ರಮ ತೆಗೆದು ಕೊಳ್ಳಲಾಗುವುದೆಂದು ತಿಳಿದು ಬಂದಿದೆ.

ಗ್ರಾಮಸ್ಥರಲ್ಲಿ ಎರಡು ಗುಂಪಾಗಿದ್ದು ಒಂದೊಂದು ಗುಂಪು ಇವರಲ್ಲಿ ಒಬ್ಬೊಬ್ಬರನ್ನು ಬೆಂಬಲಿಸುತ್ತಿರುವ ದುರದೃಷ್ಟಕರ ಸನ್ನಿವೇಶವೂ ಕಂಡುಬರುತ್ತಿದೆ.

ಬರ ಪರಿಹಾರ ನಿಧಿಗೆ
ದೇಣಿಗೆ

ಕೊಪ್ಪದ ಮೈಸೂರು ಬ್ಯಾಂಕ್ ನೌಕರರು 401 ರೂ. ನೀಡಿದ್ದಾರೆ. ಬ್ಯಾಂಕರ್ಸ್ ರಿಕ್ರಿಯೇಷನ್ ಕ್ಲಬ್ ವತಿಯಿಂದ 1001 ರೂ. ನೀಡಲಾಗಿದೆ.

ಕಿಗ್ಗ ದೇವಸ್ಥಾನದಲ್ಲಿ ಸಹ ಪಂಕ್ತಿ ಭೋಜನಕ್ಕೆ ಆಗ್ರಹ: ಒಂದು ವಿವೇಚನೆ

ಕಿಗ್ಗದಲ್ಲಿ ಮಾಮೂಲಿನಂತೆ ಮಹಾ ರುದ್ರಹೋಮ ನಡೆಸುವ ಬಗ್ಗೆ ಅಂತಿಮ ತೀರ್ಮಾನ ಕೈಗೊಳ್ಳಲು ರುದ್ರಹೋಮ ಸೇವಾ ಸಮಿತಿಯ ಸಭೆಯನ್ನು ಸಮಿತಿಯ ಅಧ್ಯಕ್ಷರು ಮಾ. 10ರಂದು ಕಿಗ್ಗದಲ್ಲಿ ಕರೆದಿರುವುದಾಗಿ ಸುದ್ದಿಯೊಂದು ಪ್ರಕಟವಾಗಿತ್ತು.

ಕಳೆದ ನವೆಂಬರ್‌ನಲ್ಲಿ ನಡೆದ ಮಹಾ ರುದ್ರಹೋಮದ ದಿನ ಸಹಪಂಕ್ತಿ ಭೋಜನಕ್ಕಾಗಿ ಕೆಲವು ಮಂದಿ 'ಶೂದ್ರ' ಯುವಕರು ಒತ್ತಾಯಿಸಿದ್ದರಿಂದ ಉಂಟಾದ ಸನ್ನಿವೇಶವೇ ಬಹುಶಃ ಈ ಮೇಲ್ಕಂಡ ಸಭೆ ಕರೆಯಲು ಕಾರಣವಾಗಿರ ಬಹುದು.

ಸಹಪಂಕ್ತಿಗೆ ಒತ್ತಾಯ

ಅದು ಕಾರಣವಾಗಿರಲಿ ಇಲ್ಲದಿರಲಿ, ಕಿಗ್ಗದ ರಥೋತ್ಸವ ಮತ್ತು ರುದ್ರಹೋಮಗಳಲ್ಲಿ ಸಹಪಂಕ್ತಿ ಭೋಜನಕ್ಕಾಗಿ ಬ್ರಾಹ್ಮಣೇತರರ ಒತ್ತಾಯವೊಂದು ಈಗಾಗಲೇ ಹಲವು ವರ್ಷಗಳಿಂದ ಇರುವಂತೆ ಕಂಡು ಬರುತ್ತಿದೆ.

ಇಲ್ಲಿನ ತೇರನ್ನು ಈ ಭಾಗದ ಗೌಡಲು ಗಿರಿಜನರು ಕಟ್ಟುವುದು ವಾಡಿಕೆ. ಆದರೆ ತೇರು ಕಟ್ಟಿ ಆದ ನಂತರ ಅವರು ಮೈಲಿಗೆ. ಅವರ ಊಟವಂತೂ ಹೇಗೂ ಹೊರಗೇ. ಇದನ್ನು ಆರೇಳು ವರ್ಷಗಳ ಹಿಂದೆ ಕೆಲಮಂದಿ ಗಿರಿಜನರು ಪ್ರಶ್ನಿಸಿ ಅದನ್ನು ಬ್ರಾಹ್ಮಣರು ವಿರೋಧಿಸಿ ಸಣ್ಣ ತಕರಾರು ಆಗಿತ್ತೆಂದು ಒಂದು ಸುದ್ದಿಯಿದೆ. ಈ ವರ್ಷ ರುದ್ರಹೋಮದಂದು ಒಕ್ಕಲಿಗರು ಸಹಪಂಕ್ತಿ ಭೋಜನಕ್ಕಾಗಿ ಒತ್ತಾಯಿಸಿದ್ದರು.

ಸನ್ನಿವೇಶ, ಹಿನ್ನೆಲೆ

ಕಿಗ್ಗದ ರುದ್ರಹೋಮ, ರಥೋತ್ಸವಗಳೆಲ್ಲ ಸುತ್ತಲ ಹತ್ತಾರು ಮೈಲಿ ಫಾಸಲೆಯ ಹಳ್ಳಿಗಳ ಎಲ್ಲಾ 'ಹಿಂದೂ' ಜಾತಿಗಳ ಸಾವಿರಾರು ಜನರು ಸೇರಿ ಮಾಡುವಂಥವು ಈಗ್ಗೆ 3 ವರ್ಷಗಳ ಹಿಂದೆ, ಪೂಜೆಯ ಬ್ರಾಹ್ಮಣರನ್ನು (ಋತ್ವಿಜರು) ಮಾತ್ರ ಹೊರತುಪಡಿಸಿ ಉಳಿದ ಎಲ್ಲರಿಗೂ ಸಹಪಂಕ್ತಿ ಭೋಜನ ಎಂದು ಸಮಿತಿ ತೀರ್ಮಾನವಾಗಿತ್ತಂತೆ. ಇದನ್ನು ಮೆತ್ತಗೆ ತಳ್ಳಿಹಾಕಿ, ಬ್ರಾಹ್ಮಣ – ಶೂದ್ರರು ಬೇರೆ ಬೇರೆ ಊಟ ಮಾಡುವ ಪರಿಸ್ಥಿತಿ ನಿರ್ಮಾಣ ಮಾಡಲಾಯಿತಂತೆ.

ಇದನ್ನರಿತ ಸುಮಾರು 50 ಜನ ಶೂದ್ರ ಯುವಕರು. "ಶೂದ್ರರೆಂದು ಕಾಣಿಕೆ ಬಿಡದೆ, ಪೂಜೆಯೊಂದು ಬಿಟ್ಟು ಬೇರೇನು ಕೆಲಸವಿದ್ದರೂ ನಮ್ಮಿಂದ ಮಾಡಿಸಿಕೊಂಡು, ಹೆಚ್ಚಾಗಿ ನಾವೇ ಕೊಡುವ ಹಣ–ಅಕ್ಕಿಯಿಂದ ನಾವೇ ದೂರ ಕುಳಿತು ಊಟ ಮಾಡುವುದೆಂದರೆ ನಾವೂ ಅವರಂತೆಯೇ ಮನುಷ್ಯರಲ್ಲವೆ? ಶೃಂಗೇರಿಯ ಕುಂಭಾಭಿಷೇಕದಲ್ಲಿ ಒಟ್ಟಿಗೆ ಕೂರಿಸಿಕೊಂಡು ಇಲ್ಲೇಕೆ ಸಾಧ್ಯವಿಲ್ಲ?" ಎಂದು ಯೋಚಿಸಿ, "ನಾವೆಲ್ಲ ಹಿಂದುಗಳೂ ಒಂದೇ" ಎಂದು ಪಠಿಸುವವರನ್ನು ಪರೀಕ್ಷಿಸ ಹೊರಟು ವಿಫಲರಾದರಂತೆ.

ಗುರುಗಳ ಅಭಿಮತ ಏನು?

ಹೀಗೆ ಅಂದು ತಾರತಮ್ಯವನ್ನು ಪ್ರತಿಭಟಿಸಿ, ಸಮಾನ ನಡವಳಿಕೆಗೆ ಒತ್ತಾಯಿಸಿದ ಒಕ್ಕಲಿಗ ಯುವಕರು, "ಇಂದೂ ಕೂಡ ನಾವು ಬೇರೆಯವರಿಗಿಂತ ಕೀಳು ಎಂದು ಹೇಳುವ ಧರ್ಮ ನಮಗೆ ಬೇಕಾಗಿಲ್ಲ. ಈ ಅವಮಾನವನ್ನು ನಾವು ಎದುರಿಸುತ್ತೇವೆ. ಇದು ಹೀಗೇ ಮುಂದುವರಿಯಬೇಕೆನ್ನುವುದಾದರೆ ನಾವು ಬ್ರಾಹ್ಮಣೇತರರ ಹೋರಾಟವನ್ನು ಸಂಘಟಿಸಬೇಕಾಗುತ್ತದೆ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಶೃಂಗೇರಿ ಮತ್ತು ಹರಿಹರಪುರ ಮಠಾಧೀಶರಿಂದ ಅವರ ಅಭಿಪ್ರಾಯವನ್ನು ಅಪೇಕ್ಷಿಸುತ್ತೇವೆ. ಅಂತೆಯೇ ಪತ್ರಿಕೆಯಲ್ಲಿ ಈ ಸಂಬಂಧವಾದ ಸಾಮೂಹಿಕ ಚಿಂತನೆ–ಚರ್ಚೆಯಲ್ಲಿ ಧರ್ಮ ಪ್ರಚಾರಕರು, ದೇವಸ್ಥಾನದ ಆಡಳಿತ ಸಮಿತಿ, ಸ್ಥಳೀಯ ಮಠಾಧೀಶರು, ಹಾಗೂ ಎಲ್ಲಾ ವರ್ಗದ ಜನ ಪಾಲ್ಗೊಳ್ಳಲಿ" ಎಂದು ಅಪೇಕ್ಷಿಸಿದ್ದಾರೆ

ಆಡಳಿತಾಧಿಕಾರಿ ಪ್ರತಿಕ್ರಿಯೆ

ಈ ವಿಚಾರವಾಗಿ ದೇವಸ್ಥಾನದ ಮುಜರಾಯಿ ಆಡಳಿತಾಧಿಕಾರಿಯಾದ ತಹಸೀಲ್ದಾರರನ್ನು ಕೇಳಿದಾಗ, "ಅಧಿಕೃತವಾಗಿ ನಾವೇನೂ ಹೇಳಬಾರದಾದರೂ, ಈ ಯುವಕರ ನಿಲುವು ಅತ್ಯಂತ ಪ್ರಗತಿಪರ ಮತ್ತು ಸ್ವಾಗತಾರ್ಹ. ಇದನ್ನು ಎಲ್ಲರೂ ಪ್ರೋತ್ಸಾಹಿಸಬೇಕು" ಎಂದಿದ್ದಾರೆ.

ಕನ್ವೀನರ್ ಪ್ರತಿಕ್ರಿಯೆ

ಈ ವಿಚಾರದಲ್ಲಿ ದೇವಸ್ಥಾನದ ಆಡಳಿತ ಸಮಿತಿ ಕನ್ವೀನರ್ ಕೆ. ಸಿ. ಶಿವಶಂಕರ ರಾವ್ ಅವರನ್ನು ನಾವು ವಿಚಾರಿಸಿದಾಗ ಅವರು ಕೊಟ್ಟ ಪ್ರತಿಕ್ರಿಯೆಯ ಸಾರಾಂಶ ಇಲ್ಲಿದೆ:

ಸಹಪಂಕ್ತಿ ಭೋಜನಕ್ಕೆ ನನ್ನದೇನೂ ಅಭ್ಯಂತರವಿಲ್ಲ. ನಮ್ಮ ಮನೆಗಳಲ್ಲಿ ಸಹ, ಎಷ್ಟೋ ಜನ ಹರಿಜನ ನೌಕರರು, ಅಧಿಕಾರಿಗಳು ನಮ್ಮ ಜೊತೆಗೇ ಕೂತು ಊಟ ಮಾಡುತ್ತಾರೆ. ಆದರೆ ದೇವಸ್ಥಾನದಲ್ಲಿ ಬ್ರಾಹ್ಮಣೇತರರಲ್ಲಿ ಎಲ್ಲರೂ ಸ್ನಾನ ಮಾಡಿ ಬಂದಿರುವುದಿಲ್ಲ. ಋತ್ವಿಜರೂ ಸಹ ಇದೇ ಪಂಕ್ತಿಯಲ್ಲಿ ಕೂರಬೇಕೆಂದರೆ ಅವರು ಒಪ್ಪುವುದಿಲ್ಲ

ಅಂದು ಗಲಾಟೆ ಮಾಡಿದ ಯುವಕರು ಸೀದಾ ಹೋಮ ಕುಂಡದ ಪಕ್ಕದಲ್ಲೇ ಋತ್ವಿಜರು ಕೂರುವ ಜಾಗದಲ್ಲಿ ಹೋಗಿ ಕುಳಿತರು. ಇದರಿಂದ ಅವರೆಲ್ಲ ಬಹಿಷ್ಕರಿಸಿ ಹೊರಟು ಹೋದರು. ಹೀಗಾದರೆ ದೇವಸ್ಥಾನದಲ್ಲಿ ಧರ್ಮ ಕಾರ್ಯ ನಡೆಯುವುದು ಸಾಧ್ಯವಿಲ್ಲ. ಋತ್ವಿಜರಿಲ್ಲದೆ ಧರ್ಮ ಕಾರ್ಯ ನಡೆಸುವುದು ಹೇಗೆ? ನಾನು ಕನ್ವೀನರ್ ಆಗಿರುವಾಗ ಧರ್ಮ ಕಾರ್ಯ ನಿಂತು ಹೋಗುವುದನ್ನು ನಾನು ಸಹಿಸಲು ಸಾಧ್ಯವಿಲ್ಲ. ಬೇರೆ ಯಾರು ಬೇಕಾದರೂ ಇದನ್ನು ನಡೆಸಲಿ. ನನ್ನ ಅಭ್ಯಂತರವಿಲ್ಲ.

ಅದೇ ದಿನ, ಹೊರಗಡೆ ಕೆಲವು ಮಂದಿ ಹಿಂದುಳಿದ ಜಾತಿಗಳವರು ತಾವೂ ದೇವಸ್ಥಾನದೊಳಗೇ ಊಟಕ್ಕೆ ಬರುತ್ತೇವೆ ಎಂದು ಪ್ರಯತ್ನಿಸಿದಾಗ ಇದೇ ಒಕ್ಕಲಿಗರೇ ತಡೆದರು–ಮೈಲಿಗೆಯಾಗುತ್ತದೆಂದು. ಅವರ ಮನೆಗಳಲ್ಲಿ ಹಿಂದುಳಿದವರ ಬಗ್ಗೆ ನಮ್ಮ ಮನೆಗಳಿಗಿಂತ ಹೆಚ್ಚು ಭೇದ ಆಚರಿಸುತ್ತಾರೆ. ಈ ಬಗ್ಗೆ ಅವರೂ ಯೋಚನೆ ಮಾಡಲಿ.

ನಿಜವಾಗಿ ಹೇಳುವುದಾದರೆ ಕೆಲವೇ ಜನ ಯುವಕರು ಈ ಗಲಾಟೆಗೆ ಕಾರಣರು. ಅವರ ಹಿರಿಯರು ಸಹ ಇದನ್ನು ಒಪ್ಪುವುದಿಲ್ಲ. ಅಂದು ಕೂಡ ಅವರೆಲ್ಲ ಈ ಬಗ್ಗೆ ನಮಗೆ ತಮ್ಮ ಅಸಮಾಧಾನ ತಿಳಿಸಿದ್ದಾರೆ.

—ಹೀಗೆನ್ನುತ್ತಾರೆ ಶಿವಶಂಕರರಾವ್.

ಧರ್ಮ ಇದೇಯೆ?

ಹಾಗಾದರೆ, ಸ್ನಾನದ ಮಡಿಯೇ ಸರ್ವಸ್ವವೆ? ದಿನವೂ ಸ್ನಾನ ಮಾಡುವ ಎಷ್ಟೋ ಜನ ಬ್ರಾಹ್ಮಣರು ಕೇವಲ ನಾಲ್ಕೈದು ತಂಬಿಗೆ ನೀರು ಸುರಿದುಕೊಂಡು ಬರುತ್ತಾರೆ. ಅವರೂ ಶುದ್ಧರು, ಸ್ವಚ್ಛರು, ಮಡಿ–ಎನ್ನಬಹುದೆ? ಧರ್ಮ ಇದರ ಬಗ್ಗೆ ಏನು ಹೇಳುತ್ತದೆ? ಎಷ್ಟೋ ಜನ ಋತ್ವಿಜರು ಸಹ ದಿನಗಟ್ಟಲೆ ಕುಳಿತು ಇಸ್ಪೀಟ್ ಇತ್ಯಾದಿಗಳಲ್ಲಿ ತಲ್ಲೀನರಾಗಿರುತ್ತಾರೆ. ಬ್ರಾಹ್ಮಣರು ನಿಷಿದ್ಧ ವೃತ್ತಿ (ವ್ಯಾಪಾರ ಇತ್ಯಾದಿ) ಯನ್ನು ಸಹ ಮಾಡುವಂತಿಲ್ಲ. ನೇಗಿಲು ಹಿಡಿಯುವಂತಿಲ್ಲ. ಈ ವಿಚಾರಗಳಲ್ಲೆಲ್ಲ ನಾವೇನು ಧರ್ಮವನ್ನು ಕಟ್ಟು ನಿಟ್ಟಾಗಿ ಅನುಸರಿಸುತ್ತಿದ್ದೇವೆಯೊ? ನಮ್ಮ ದೇಶದ ಸಂವಿಧಾನ ಜಾತ್ಯತೀತತೆಯನ್ನು ಸಾರುವಾಗ ಸರ್ಕಾರಿ ದೇವಸ್ಥಾನದಲ್ಲಾದರೂ ಜಾತಿ ಭೇದವನ್ನು ತಡೆಗಟ್ಟಬೇಡವೆ? ಶೃಂಗೇರಿ ಕುಂಭಾಭಿಷೇಕದಲ್ಲಿ ಆರಂಭಿಸಿದ್ದನ್ನು ಎಲ್ಲ ಕಡೆ ಮುಂದುವರಿಸುವುದೊಳ್ಳೆಯದಲ್ಲವೆ? ಇವೇ ಮುಂತಾದ ನಮ್ಮ ಪ್ರಶ್ನೆಗಳಿಗೆ ಶಿವಶಂಕರರಾವ್, 'ಇದನ್ನೆಲ್ಲ ಋತ್ವಿಜರು ಒಪ್ಪುವುದಿಲ್ಲ. ಅಲ್ಲಿ ಒಳ್ಳೆಯ ನಿಷ್ಠಾವಂತ ಋತ್ವಿಜರೇ ಇರುತ್ತಾರೆ ಅಲ್ಲದೆ ಶೃಂಗೇರಿ ಕುಂಭಾಭಿಷೇಕದಲ್ಲಿ ಕೂಡ ಸಹಪಂಕ್ತಿ ಭೋಜನವಲ್ಲದೆ ಋತ್ವಿಜರಿಗೆ ಮಠದಲ್ಲಿ ಬೇರೆಯೇ ಊಟದ ವ್ಯವಸ್ಥೆ ಇತ್ತು. ಸಾಮೂಹಿಕ ಭೋಜನದಲ್ಲೂ ಬಿಳಿ ಪಂಚೆ ಉಟ್ಟು ಶರ್ಟ್ ತೆಗೆದವರಿಗೇ ಬೇರೆ ಪಂಕ್ತಿ, ಪ್ಯಾಂಟು–ಶರ್ಟು ಹಾಕಿದವರಿಗೇ ಬೇರೆ ಪಂಕ್ತಿ ಇತ್ತು. ಅಷ್ಟಾಗಿಯೂ ಅಲ್ಲಿ ಸರಿಯಾಗದ ಎಷ್ಟೋ ಜನ ಬ್ರಾಹ್ಮಣರು ಋತ್ವಿಜರ ಪಂಕ್ತಿಗೇ ಊಟಕ್ಕೆ ಹೋಗುತ್ತಿದ್ದರು.' ಎಂದರು.

ಒಟ್ಟಿನಲ್ಲಿ, ಋತ್ವಿಜರೂ ಸೇರಿದಂತೆ ಸಹಪಂಕ್ತಿ ಭೋಜನ ಸಾಧ್ಯವಿಲ್ಲವೆಂದೂ, ಅವರೆಲ್ಲ ಬಹಿಷ್ಕಾರ ಹಾಕಿದರೆ ತನ್ನ ಕಾಲದಲ್ಲಿ ಧರ್ಮಕಾರ್ಯ ನಿಂತು ಹೋಗುವ ಅಪವಾದಕ್ಕೆ ರಾಯರು ಸಿದ್ಧರಿಲ್ಲವೆಂದೂ, ಇಂಥ ಪ್ರಸಂಗ ಉಂಟಾಗುವುದನ್ನು ಈ ಯುವಕರ ಹಿರಿಯರೇ ವಿರೋಧಿಸುತ್ತಾರೆಂದೂ ಅವರ ಅಭಿಪ್ರಾಯವಿದ್ದಂತೆ ಕಂಡಿತು.

ಇನ್ನೂ ಹೆಚ್ಚಿನ ಚರ್ಚೆ–ವಿಮರ್ಶೆಗಳನ್ನು ಓದುಗರಿಗೆ ಬಿಡುತ್ತೇವೆ.

ವೇದಿಕೆ

ಕಿಗ್ಗದ ಮುಜರಾಯಿ ದೇವಸ್ಥಾನ ಎಲ್ಲಾ ಜಾತಿಗಳ ಭಕ್ತಾದಿಗಳೂ ಸೇವೆ, ವಂತಿಗೆ ನೀಡಿ ನಡೆದುಕೊಳ್ಳುತ್ತಿರುವಂಥದು. ಇಲ್ಲಿ ನಡೆಯುವ ರಥೋತ್ಸವ, ರುದ್ರಹೋಮಗಳಂದು ಸಹಪಂಕ್ತಿ ಭೋಜನಕ್ಕಾಗಿ ಒತ್ತಾಯವೊಂದು ಬಲಗೊಳ್ಳುತ್ತಿರುವುದು ಕಂಡುಬರುತ್ತದೆ.

ಈ ವಿವಾದ ಅಥವಾ ಸಮಸ್ಯೆ ವಿಕಾರ ರೂಪ ಪಡೆಯದೆ ಸೌಹಾರ್ದದಲ್ಲಿ ಬಗೆಹರಿಯುವುದು ಅತ್ಯಗತ್ಯ. ಇದಕ್ಕಾಗಿ ಮುಕ್ತವಾದ ಚರ್ಚೆ ಆಗ ಬೇಕೆಂದು ನಮ್ಮ ಅನಿಸಿಕೆ. ಆದ್ದರಿಂದ 'ವೇದಿಕೆ' ಯಲ್ಲಿ ಚರ್ಚೆ ಆರಂಭಿಸುತ್ತಿದ್ದೇವೆ.

ಎಲ್ಲಾ ಸಂಬಂಧಿತರೂ ಇದರಲ್ಲಿ ಭಾಗವಹಿಸಿ ತಮ್ಮ ಅಭಿಪ್ರಾಯ ನೀಡಲು ಆಹ್ವಾನಿಸುತ್ತ, ಚರ್ಚೆ ಸಾಧ್ಯವಾದಷ್ಟೂ ವಿಷಯವನ್ನು ಬಗೆ ಹರಿಸುವತ್ತ, ಪರಿಸ್ಥಿತಿಯ ಸುಧಾರಣೆಯತ್ತ ಗಮನ ಕೇಂದ್ರೀಕರಿಸಲಿ. ಅನಗತ್ಯ ಟೀಕೆ, ನಿಂದನೆಗಳಿಗೆ ಒತ್ತು ಬೇಡ. ಹಾಗೊಂದು ವೇಳೆ ಅನಿವಾರ್ಯವಾದ ಟೀಕೆಗಳಿದ್ದಲ್ಲಿ ಟೀಕಿಸಲ್ಪಟ್ಟವರು ವ್ಯಕ್ತಿಗಳಾಗಲಿ, ಸಮುದಾಯವಾಗಲಿ, ತೆರೆದ ಮನಸ್ಸಿನಿಂದ ಆತ್ಮ ವಿಮರ್ಶೆ ಮಾಡಿಕೊಳ್ಳಲಿ. 'ಟೀಕೆಗೊಂದು ಮರು ಟೀಕೆ' ಎಂಬಂತೆ ಆಕ್ರೋಶಕ್ಕೆ, ಅಸಂಬದ್ಧವಾದ ಸರಣಿಗೆ ಅವಕಾಶ ಕೊಡದಿರಲಿ ಎಂದು ವಿನಂತಿಸುತ್ತೇವೆ.

ಈ ಬಗ್ಗೆ ಅಭಿಪ್ರಾಯಗಳನ್ನು ಹೊಂದಿರುವವರು ಅಕಸ್ಮಾತ್ 'ನಮಗೆ ಬರೆಯಲು ಬರುದಿವುಲ್ಲ' ಎಂದು ಸುಮ್ಮನಾಗದೆ ಬೇರೆಯವರ ಹತ್ತಿರ ಹೇಳಿ ಬರೆಸಿಯಾದರೂ ತಮ್ಮ ಅಭಿಪ್ರಾಯಗಳನ್ನು ವೇದಿಕೆಗೆ ಮುಟ್ಟಿಸಿ. ಅಲ್ಲಿ ಇಲ್ಲಿ ನಿಂತು ಮಾತಾಡಿ ಬಾಯಿ ಖಾಲಿ ಮಾಡಿಕೊಳ್ಳುವ ಕೆಲವರೂ ಸಹ ಸ್ವಲ್ಪ ಗಂಭೀರ ಚಿಂತನೆ ಮತ್ತು ಚರ್ಚೆಯ ಕಡೆ ಗಮನ ಕೊಡಿ.

ಸಿರಿಮನೆ ನಾಗರಾಜ್, ಕಲ್ಕುಳಿ ವಿಠಲ ಹೆಗ್ಡೆ

ಒಂದು ನಮ್ರ ಸೂಚನೆ

ರುದ್ರಹೋಮ ಸೇವಾ ಸಮಿತಿ ಮಾ. 10 ರಂದು ಕರೆದಿದ್ದ ಸಭೆ ಕೋರಂ ಇಲ್ಲದ್ದರಿಂದ ಮುಂದಕ್ಕೆ ಹೋಗಿರುವುದಾಗಿ ತಿಳಿದು ಬಂದಿದೆ. ಈ ಸಂದರ್ಭದಲ್ಲಿ ಸಮಿತಿಯವರ ಮುಂದೆ ನಾವೊಂದು ಸಲಹೆಯನ್ನು ಇಡುತ್ತಿದ್ದೇವೆ ಏನೆಂದರೆ,

ಈ ಹಂತದಲ್ಲಿ ಸಭೆ ನಡೆದರೆ ಬಹು ಪಾಡಿ ಪರಸ್ಪರ ಆರೋಪ–ಪ್ರತ್ಯಾರೋಪ, ಅಸಮಾಧಾನಗಳೊಂದಿಗೆ ಮುಕ್ತಾಯಗೊಳ್ಳುವ ಸಾಧ್ಯತೆಗಳೇ ಹೆಚ್ಚು. ಊರಿನ ಶಾಂತಿ–ಸೌಹಾರ್ದತೆಗಳು ಬಹಳ ಮುಖ್ಯವಾಗಿರುವ ಇಂದು, ಇನ್ನೊಮ್ಮೆ ಸಭೆ ನಡೆಸುವ ಮೊದಲು ಅಭಿಪ್ರಾಯ ಸಂಗ್ರಹ, ಅಭಿಪ್ರಾಯ ವಿನಿಮಯ ಸಾಧ್ಯವಾದಷ್ಟೂ ಆಗಲಿ ಎಂಬುದು ನಮ್ಮ ಅನಿಸಿಕೆ.

ಇದಕ್ಕಾಗಿ ಸಭೆ ನಡೆಸುವ ದಿನಾಂಕವನ್ನು ಇನ್ನೂ ಸ್ವಲ್ಪ ಕಾಲ ಅಂದರೆ ಒಂದು–ಒಂದೂವರೆ ತಿಂಗಳಷ್ಟು–ಮುಂದೂಡುವುದು ಉಚಿತವಲ್ಲವೆ?

—ಸಂಪಾದಕ

ಓದುಗರ ಪತ್ರಗಳು

ಸೋಮ್ಲಾಪುರದಲ್ಲಿ 'ಪತ್ತೆಯಾದ' ವಿಗ್ರಹಗಳ ವಿಚಾರದಲ್ಲಿ

"ಪವಾಡ, ಅದ್ಭುತ ಏನೂ ಇಲ್ಲ, ಮೋಸವೇ ಇರಲು ಸಾಧ್ಯ"

ಮಾನ್ಯರೆ,

ಇತ್ತೀಚೆಗೆ ಕೊಪ್ಪ ಸಮೀಪದ ಸೋಮ್ಲಾಪುರದಲ್ಲಿ ವಿಗ್ರಹ ಪತ್ತೆಯಾಗಿವೆ ಎಂಬುದು ಒಂದು ಕಟ್ಟು ಕಥೆಯಾಗಿದ್ದು ಹೊಟ್ಟೆ ಹೊರೆದುಕೊಳ್ಳಲು ಮಾಡಿರುವ ಉಪಾಯವಲ್ಲದೆ ಮತ್ತೇನೂ ಅಲ್ಲ.

ವಿಗ್ರಹಗಳು ಸಿಕ್ಕಿರುವ ಸ್ಥಳಕ್ಕೆ ಇತ್ತೀಚೆಗೆ ನಾನು ಭೇಟಿ ನೀಡಿ ಆ ಸ್ಥಳವನ್ನೂ ವಿಗ್ರಹಗಳನ್ನೂ ಪರಿಶೀಲಿಸಿದೆ. ದೇವಸ್ಥಾನದ ಅರ್ಚಕರು ಹೇಳುವಂತೆ ಅವು ಸುಮಾರು 700 ವರ್ಷಗಳ ಹಿಂದಿನ ವಿಗ್ರಹಗಳಲ್ಲವೆಂಬುದು ಆ ವಿಗ್ರಹಗಳನ್ನು ಪರಿಶೀಲಿಸಿದಾಗ ತಿಳಿಯುತ್ತದೆ.

ಅವು ಇತ್ತೀಚಿನ ದಿನಗಳಲ್ಲಿ ತಯಾರಿಸಿದ ವಿಗ್ರಹಗಳಂತೆ ಇವೆ ಎಂದರೆ ಖಂಡಿತಾ ಉತ್ಪ್ರೇಕ್ಷೆಯಾಗಲೀ, ಪೂರ್ವಾಗ್ರಹ ಪೀಡಿತವಾದುದಾಗಲಿ ಆಗಲಾರದು. ಇನ್ನೂ ಹಲವರನ್ನು ಭೇಟಿಯಾಗಿ ಅಭಿಪ್ರಾಯ ಸಂಗ್ರಹಿಸಿದಾಗ ವಿಗ್ರಹಗಳು ದೊರೆತಿರುವ ಸ್ಥಳ ಸಾಕಷ್ಟು ಮೃದುವಾದ ಮಣ್ಣಿನಿಂದ ಕೂಡಿದ ಸ್ಥಳವಾಗಿದೆ ಎಂದಿದ್ದಾರೆ.

ಮೂಲತಃ ಈ ವಿಗ್ರಹಗಳು ಪತ್ತೆಯಾಗಿರುವ ಹಿನ್ನೆಲೆಯಲ್ಲಿ ಅನುಮಾನ ಮೂಡಿಬರಲು ಆಧಾರವಾಗಿರುವ ಅಂಶಗಳೆಂದರೆ ಒಂದನೆಯದು, ವಿಗ್ರಹಗಳ ವಾಸ್ತವ ರೂಪ, ಎರಡನೆಯದು, 'ಇಂತಹದೇ ದಿನ ಇಂತಹದೇ ಸ್ಥಳದಲ್ಲಿ ಇಂತಹದೇ ವಿಗ್ರಹ ಸಿಗುತ್ತದೆ' ಎಂಬುದು.

ನಮ್ಮಲ್ಲಿ ಹಿಂದಿನ ಕಾಲದಿಂದಲೂ ನೆಲದಡಿಯಲ್ಲಿ ಸಾಕಷ್ಟು ವಿಗ್ರಹಗಳು ಪತ್ತೆಯಾಗಿವೆಯಾದರೂ ಇಂತಿಷ್ಟೆ ಸಮಯದಲ್ಲಿ ಇಂತಹದೇ ದಿನ ಸಿಗುತ್ತದೆ ಎಂದು ಖಚಿತವಾಗಿ ತಿಳಿದು ಸಿಕ್ಕಿರುವ ಉದಾಹರಣೆಗಳು ನನಗೆ ತಿಳಿದಿಲ್ಲ.

ಯಾವುದೇ ವಿಚಾರದ ಬಗ್ಗೆಯೂ ನಾವು ಮಂಥನ ಮಾಡುವಾಗ ಏಕದೃಷ್ಟಿಯಿಂದ ನೋಡಬಾರದು. ಹಲವು ದೃಷ್ಟಿಕೋನದಿಂದ ನೋಡಬೇಕು. ವಿಗ್ರಹ ಸಿಕ್ಕಿತು ಎಂದ ಮಾತ್ರಕ್ಕೆ ಸತ್ಯ, ಅದ್ಭುತ, ಪವಾಡ ಎಂದೆಲ್ಲ ಹೊಗಳಿ ಅಟ್ಟಕ್ಕೆ ಏರಿಸಿ ಆ ಮಹಿಮೆ—ಈ ಮಹಿಮೆ ಎಂದು ಕೊಂಡಾಡುವುದರಲ್ಲಿ ಯಾವುದೇ ಅರ್ಥವಿಲ್ಲ. ಏಕೆಂದರೆ ಒಂದು ವೇಳೆ ವಿಗ್ರಹ ಸಿಕ್ಕಿದರೂ ಅದರಲ್ಲಿ ಅದ್ಭುತವಾಗಲೀ, ಪವಾಡವಾಗಲಿ ಏನಿದೆ?

ವಿಗ್ರಹಗಳು ಸಿಗುತ್ತವೆ ಎಂದು ಕನಸು ಬಿದ್ದ ವ್ಯಕ್ತಿಯನ್ನೂ, ಜೋತಿಷ್ಯ ನೋ... ಇಂತಹದೇ ದಿನ ವಿಗ್ರಹ ದೊರೆಯುತ್ತ... ಎಂದು ಹೇಳಿರುವ ವ್ಯಕ್ತಿಗಳನ್ನೂ ನಾ... ಆಳವಾಗಿ ನೋಡಬೇಕು

ತಾನು ಕಲಿತಿರುವ ಜೋತಿಷ್ಯ (?... ಹೆಸರುವಾಸಿಯಾಗಲಿ, ಹೊಟ್ಟೆ ತುಂಬಿ... ಕೊಳ್ಳಲು ದಾರಿಯಾಗಲಿ, ಸಾಕಷ್ಟು ಸ... ಖ್ಯೆಯಲ್ಲಿ ಜನರು ತನ್ನಲ್ಲಿಗೆ ಬರಲಿ ಎಂ... ದೃಷ್ಟಿಯಿಂದ ಯಾಕೆ ಈ ಒಂದು 'ನಾಟಕ...

(4ನೇ ಪುಟಕ್ಕೆ...

ಹೆಣ್ಣಾಗಿ ಹೆಣ್ಣೀಗೆ ಮುಳ್ಳಾದ ಗುತ್ಯವ್ವ...

ಹೆಣ್ಣಾಗಿ ಹೆಣ್ಣಿಗೆ ಮುಳ್ಳಾದಿಯಲ್ಲವ್ವ
ಕಳ್ಳು ಬಳ್ಳಿಗಳನ್ನೇ ಕಡಿ ಚೂಟಿ ಕೊಂದಿ
ಕಣ್ಣ ಎಂಜಲದಾಗ ಎಣಗಾಯಿ ನೂಡಿದ್ದಿ
ಹೆಣ್ಣಾ ಹೆಂಗಸು ಯಾಕ ತಣ್ಣಾಗೆ ಕಲ್ಲಾದಿ॥

ತಿಂಗಳ ತಿಂಗಳಿನ ಬೆಳಕುಳ್ಳ ಬಾಲೇರು
ಉಡುತಾರೆ ಕತ್ತಲ ಹರಕೆಯ ಪತ್ತಲ
ಹುಣ್ಣಾ ಹುಣ್ಣಿವಿಗೆ ಚಂದ್ರಮಾನ ಕುತ್ತಿಗೆ
ಕೊಯುತೇತಿ ಗುತ್ತಿ ನಗುತೈತಿ ಕತ್ತೆತ್ತಿ॥

ಭೀತಿಯನೆಡುವಂಥ ಅಮಲಿನ ಅಜ್ಜೇರು
ಮುದಿಯ ಜಿಂಗಾಪಲು ಹರಯ ಹರಾಜಿಗೆ
ತುಳಿಯುವ ಬೆಂಕಿಗೆ ಕುದಿಯುವ ಹಾಲಿಗೆ
ಹುಳಿ ಹಿಂಡಿ ಕೊಡುತಾರ ಹಾದರದ ಕೇರಿಗೆ॥

ಹೂವಿನ ಜೀವದ ಕೂಸಿನ ತಾಯೇರು
ಮಾನಾದ ಪದಕವ ಧರಸಿದ ಗರತೇರು
ಉಡಿ ಉಗುಚಿ ಮುಡಿ ಬಿಚ್ಚಿ ಓಡುವ ದೌಡಿಗೆ
ಹೌಹಾರಿ ನಿಂತವೆ ಎಸಳಗಣ್ಣುಗಳು

ಒಡಲ ರಸವೆಂಬುದೆ ವರದಾ ನದಿಯಾಗಿ
ಜೀವಫಲ ನೀಡುವ ಮಲೆನಾಡ ನೆಲವಾಗಿ
ಅರಳಿದ ಬದುಕನ್ನೇ ನುಂಗುವ ಬಾಯಾಗಿ
ನಿನ ಕಡವೆ ನಿನ ಕುಲದ ಸಿದಿಗೆಯಾತವ್ವ॥

ಹೆಣ್ಣಾಗಿ ಹೆಣ್ಣಿಗೆ ಮುಳ್ಳಾದಿ ಗುತ್ಯವ್ವ
ಕಳ್ಳು ಬಳ್ಳಿಗಳನ್ನೇ ಕುಡಿ ಚೂಟಿ ಕೊಂದಿ
ಕಣ್ಣ ಎಂಜಲದಾಗ ಎಣಗಾಯಿ ಮಾಡಿದ್ದಿ
ಹೆಣ್ಣಾ ಹೆಂಗಸು ಯಾಕ ತಣ್ಣಾಗೆ ಕಲ್ಲಾದಿ॥

....

(ಈ ಪದ್ಯ ಬಿದರಹಳ್ಳಿ ನರಸಿಂಹಮೂರ್ತಿಯವರು ರಚಿಸಿದ್ದು. ಚಂದ್ರಗುತ್ತಿಯ ಬೆತ್ತಲೆ ಸೇವೆಯನ್ನು ನಿಲ್ಲಿಸಬೇಕೆಂದು ಜನರಿಗೆ ಮನವರಿಕೆ ಮಾಡಲು ಕರ್ನಾಟಕ ದಲಿತ ಸಂಘರ್ಷ ಸಮಿತಿ ಸೊರಬ ತಾಲ್ಲೂಕಿನ ಹಳ್ಳಿಗಳಲ್ಲಿ ಜಾತ್ರೆಗೆ ಮುಂಚಿನ ಒಂದು ವಾರ ಕಾಲ ನಡೆಸಿದ ಸಾಂಸ್ಕೃತಿಕ ಜನ ಸಂಪರ್ಕ ಕಾರ್ಯಕ್ರಮದಲ್ಲಿ ಈ ಹಾಡನ್ನು ಬಹಳ ವ್ಯಾಪಕವಾಗಿ ಬಳಸಿದರು. ಇದಕ್ಕೆ ಬಹು ಭಾವ ಪೂರ್ಣವಾದ ರಾಗ ಸಂಯೋಜನೆಯನ್ನು ಮಾಡಿದ್ದು ಹಾಡು ಕೇಳಲು ಸುಶ್ರಾವ್ಯವಾಗಿರುವುದಲ್ಲದೆ, ಕೇಳುವವರಿಗೆ ಪದ್ಯದ ಅರ್ಥವನ್ನು ಸರಿಯಾದ ರೀತಿಯಲ್ಲಿ ತಲುಪಿಸುವಂತಿದೆ. ಈ ಸಾಂಸ್ಕೃತಿಕ ಯಾತ್ರೆ ಹಾಗೂ ಚಂದ್ರಗುತ್ತಿಯ ಜಾತ್ರೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಬೆತ್ತಲ ಸೇವೆ ನಿಲ್ಲಿಸಲು ಶಕ್ತಿಮೀರಿ ಶ್ರಮಿಸಿ, ಸ್ವಸ್ಥ ಮನಸ್ಸಿನ ಎಲ್ಲರೂ ಮೆಚ್ಚುವಂತೆ ದುಡಿದ ದಲಿತ ಸಂಘರ್ಷ ಸಮಿತಿಯ ಸುಮಾರು 250 ಕಾರ್ಯಕರ್ತರು ಹಾಗೂ ಸೊರಬ, ಸಾಗರಗಳ ಸಮಾಜ ಸೇವಾ ಕಾರ್ಯಕರ್ತರ ಮತ್ತು ಕಾರ್ಯಕರ್ತೆಯರ ಮುಂಚೂಣಿಯಲ್ಲಿ ದುಡಿದವರು ದ. ಸಂ. ಸ. ಅಧ್ಯಕ್ಷ ಬಿ. ಕೃಷ್ಣಪ್ಪನವರು. ತನ್ನನ್ನು ಜನ ಜಂಗುಳಿಯ ಮಧ್ಯೆ ಕೊಂದು ಕೈ ತೊಳೆದು ಕೊಳ್ಳಲು ಹೊಂಚು ಹಾಕಿದ್ದ ಮತೀಯ ಹುಂಬರ ಕೈಗೆ ಸಿಕ್ಕಿಯೂ ಅವರು ಕೂದಲೆಳೆಯಲ್ಲಿ ಬಚಾವಾಗಿ ಬಂದರು.

ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರು ಚಂದ್ರಗುತ್ತಿಯ ತಮ್ಮ ಘೋರ ಅನುಭವಗಳನ್ನು ಸದ್ಯವೇ 'ಮುಂಜಾವು' ಓದುಗರ ಜೊತೆ ಹಂಚಿಕೊಳ್ಳಲಿದ್ದಾರೆ.

—ಸಂಪಾದಕ.)

ಶಿಕ್ಷಕರ ಸಮ್ಮೇಳನ : ಕೆಲ ಪ್ರಶ್ನೆಗಳು

ಮಾನ್ಯರೆ,

ಈಚೆಗೆ ಇಲ್ಲಿ ನಡೆದ ತಾ॥ ಮಟ್ಟದ ಶಾಲಾಭಿವೃದ್ಧಿ ಸಮಿತಿಗಳ ಮತ್ತು ಶಿಕ್ಷಕರ ಸಮ್ಮೇಳನದ ಬಗ್ಗೆ ಇಲ್ಲಿನ ಕೆಲವು ಸಾರ್ವಜನಿಕರ ಅನಿಸಿಕೆಗಳನ್ನು ಇಲ್ಲಿ ಬರೆಯುತ್ತಿದ್ದೇನೆ.

ಶಿಕ್ಷಕರ ಸಮ್ಮೇಳನ ಅಂದರೇನು? ಅದರಿಂದಾದ ಪ್ರಯೋಜನ ಏನು? ಇದನ್ನು ಏತಕ್ಕಾಗಿ ಮಾಡಬೇಕು? ಎಂಬ ಪ್ರಶ್ನೆಗಳು ಈ ಸಮ್ಮೇಳನದ ನಂತರ ಕೆಲವರನ್ನು ಕಾಡಿದವು. ಏಕೆಂದರೆ, ಸಮ್ಮೇಳನ ಆರಂಭವಾದದ್ದೇ 11 ಗಂಟೆಗೆ. ಸುಮಾರು ಮಧ್ಯಾಹ್ನ 1 ಗಂಟೆಯವರೆಗೆ ಉಪಸ್ಥಿತ ಅತಿಥಿಗಳಿಂದ ಭಾಷಣಗಳ ವಿನಃ ಬೇರೇನೂ ಕಾರ್ಯಕ್ರಮ ಕಾಣಲಿಲ್ಲ.

ಊಟವಾದ ನಂತರವೂ ಅಷ್ಟೇ. ಮಂತ್ರಿಗಳ ಮತ್ತು ಅತಿಥಿಗಳಿಂದ ಭಾಷಣ—ಪೂರತು ಮತ್ತೇನಿಲ್ಲ. ಭಾಷಣ ಅಥವಾ ಹಿತ ನುಡಿಗಳಿಂದ ಶಿಕ್ಷಕರ ನಡತೆಯ ಸುಧಾರಣೆ ಅಥವಾ ಅಪರ ಸಮಸ್ಯೆಗಳ ಪರಿಹಾರ ಸಾಧ್ಯವೆ? ಖಂಡಿತ ಸಾಧ್ಯವಿಲ್ಲವೆಂದು ಹಲವರ ಅಭಿಪ್ರಾಯ.

ಬದಲಿಗೆ ಇಲ್ಲಿ, ಶಿಕ್ಷಕರ ಮತ್ತು ಉ... ಸ್ಥಿತರಿದ್ದ ಶಾಲಾಭಿವೃದ್ಧಿ ಸಮಿತಿಗಳ ಮು... ಸ್ಥರ ನಡುವೆ ವಿಚಾರ ವಿನಿಮಯಕ್ಕೆ ಹೆಚ್ಚು... ಸಮಯ ನಿಗದಿ ಮಾಡಿದ್ದರೆ, ಕೆಲವು ಮಂದಿ... ಒಳ್ಳೆಯ ಮತ್ತು ಕೆಲವು ಮಂದಿ ಕೆಟ್ಟ ಜ... ಡನ್ನು ಹಚ್ಚಿ ಕೊಂಡಿರುವ ಶಿಕ್ಷಕರುಗಳ... ಉದಾಹರಣೆಯನ್ನು ಮುಂದಿಟ್ಟು ಕೊಂಡು... ಉತ್ತಮ ಕೆಲಸವನ್ನು ಗುರುತಿಸಿ ಮಾರ್ಗ... ದರ್ಶನ ಮಾಡಬಹುದಿತ್ತು. ಹೀಗೆ ಮಾಡು... ವುದರಿಂದ ಶಿಕ್ಷಕರಿಗೂ ಕೆಟ್ಟ ನಡತೆಯ ಬಗ್ಗೆ... ಭಯ (ಹಿಂಜರಿಕೆ) ಮತ್ತು ಒಳ್ಳೆಯ ನಡ... ತೆಗೆ ಉತ್ತೇಜನ ಉಂಟಾಗುತ್ತಿತ್ತು.

ಅದಿಲ್ಲದೆ ಈಗ ನಡೆಸಿದ ರೀತಿ ಸಮ್ಮೇಳನ... ನಡೆಸಿದರೆ, ಊರಿನ ಕೆಲವು ಜನರಿಗೆ ಹಬ್ಬ... ವಾಗಬಹುದು ವಿನಃ ಬೇರೇನೂ ಪ್ರಯೋಜ... ನವಿಲ್ಲ. ಇದೊಂದು ಉಪಯುಕ್ತವಾಗಬಹು... ದಾಗಿದ್ದೂ ಅನವಶ್ಯಕವಾಗಿ ಹೋಗುವ ಖ... ರ್ಚು ಅಷ್ಟೇ ಎನ್ನಬಹುದು.

—ಹೆಚ್. ವಿ. ನಾಗರಾಜ್...
ಹಾಲ್ಮುತ್ತೂರು...

"ಕಂದಾಯ ಇಲಾಖೆ ನೌಕರ... ಮುಷ್ಕರ ಸಂಬಳ ಏರಿಕೆಗಲ್ಲ... ಬಡ್ತಿ ಅವಕಾಶಗಳಿಗಾಗಿ"

ಮಾನ್ಯರೆ,

ತಾ॥ 17-3-86ರಿಂದ ರಾಜ್ಯಾದ್ಯ... ಕಂದಾಯ ಇಲಾಖೆ ನೌಕರರು ಮುಷ... ನಡೆಸುತ್ತಿರುವುದು ಸಂಬಳ ಏರಿಕೆಗಾಗಿ ... ಬ ತಪ್ಪು ತಿಳುವಳಿಕೆ ಸಾರ್ವಜನಿಕರಿಗೆ ... ದಿರುವಂತೆ ಕಾಣುತ್ತದೆ.

ಕಂದಾಯ ಇಲಾಖೆಯಲ್ಲಿ ವರ್ಷಾ... ಗಟ್ಟಲೆಯಿಂದ ಒಂದೇ ದರ್ಜೆಯಲ್ಲಿ ಕೊ... ಯುತ್ತಿರುವ ನೌಕರರಿಗೆ ಇತರೆಲ್ಲಾ ಇಲಾ... ಗಳಲ್ಲಿ ದೊರೆಯುವಂತೆ ಮುಂಬಡ್ತಿ ಅವಕಾ... ಶಗಳು ಹಾಗೂ ಆಡಳಿತಾತ್ಮಕ ಇಲಾ... ಗಳಲ್ಲಿ ಭರ್ತಿಯಾಗಬೇಕಾಗಿರುವ ಹುದ್ದೆಗ... ಭರ್ತಿಯನ್ನು ನಾವು ಕೇಳುತ್ತಿದ್ದೇವೆ. ಅಷ್ಟೆ... ಹೊರತು, ಸಾರ್ವಜನಿಕರಿಗೆ ತೊಂದ... ಕೊಡಬೇಕೆಂಬುದಾಗಲಿ, ಸರ್ಕಾರವನ್ನು ... ರ್ಥಿಕ ಮುಗ್ಗಟ್ಟಿನಲ್ಲಿ ಸಿಲುಕಿಸಬೇಕೆಂ... ದಾಗಲಿ ಈ ಮುಷ್ಕರದ ಉದ್ದೇಶವಲ್ಲ.

ಮುಷ್ಕರದಿಂದ ಸಾರ್ವಜನಿಕರಿಗೆ ಉ... ಟಾಗಿರುವ ಅನಿವಾರ್ಯ ಅನಾನುಕೂಲ... ಗಾಗಿ ವಿಷಾದಿಸುತ್ತೇವೆ.

—ಅಧ್ಯಕ್ಷರು, ಕಂ. ಇ. ನೌ. ಸಂ...
ನರಸಿಂಹರಾಜಪುರ ತಾ...

"ಪವಾಡ, ಅದ್ಭುತ ಏನೂ ಇಲ್ಲ"

(3ನೇ ಪುಟದಿಂದ)
ವನ್ನು ಸೃಷ್ಟಿಸಿರಬಾರದು? ಈ ರೀತಿಯಲ್ಲಿ ಯೂ ನಾವು ನೋಡಬೇಕಾಗುತ್ತದೆ.

ಇಪ್ಪತ್ತೊಂದನೆ ಶತಮಾನದತ್ತ ಕಾಲಿಡುತ್ತಿರುವ ನಾವು ಏಕಾಏಕಿ ಈ ರೀತಿಯ 'ಮೂಢ ನಂಬಿಕೆ'ಗಳಿಗೆ ಬಲಿಯಾಗುವುದು ಸರಿಯಲ್ಲ. ವಿಗ್ರಹಗಳನ್ನು ಅಧಿಕಾರಿಗಳು ದೇವಸ್ಥಾನದಲ್ಲಿ ಬಿಟ್ಟಿರುವುದು. ಸರಿಯಾದ ಕ್ರಮವಲ್ಲ. ಕೂಡಲೇ ಅದನ್ನು ತಮ್ಮ ಕಚೇರಿಯ ಸ್ವಾಧೀನಕ್ಕೆ ತೆಗೆದುಕೊಳ್ಳಬೇಕು. ಇಲ್ಲವಾದರೆ ಸಾರ್ವಜನಿಕರನ್ನು ಶೋಷಿಸುವಲ್ಲಿ ಈ ವಿಗ್ರಹಗಳು ಸಾಕಷ್ಟು ನೆರವಾಗುತ್ತವೆ ಎಂಬುದನ್ನು ಅಧಿಕಾರಿಗಳು ಇನ್ನಾದರೂ ಅರಿತು ಕೂಡಲೇ ಆ ಬಗ್ಗೆ ಕ್ರಮ ಕೈಗೊಳ್ಳಬೇಕು.

ಕಳೆದ ಹಲವು ಶತಮಾನಗಳಿಂದ ದೇವರು, ಮಂತ್ರ ಇತ್ಯಾದಿ ದಾರಿಗಳಿಂದ ಮುಗ್ಧ ಜನರನ್ನು ಶೋಷಿಸುತ್ತಾ ಬಂದಿರುವ ಜನರಿಂದು ಮತ್ತೆ ಅದೇ ದಾರಿಯಲ್ಲಿ ಮುಂದುವರಿಯಲು ಬಿಡುವುದು ತರವಲ್ಲ.

ಸೋಮ್ನಾಪುರದಲ್ಲಿ ಸಿಕ್ಕಿರುವ ವಿಗ್ರಹಗಳ ಬಗ್ಗೆ ಪ್ರತಿಯೊಬ್ಬರೂ ಪರಿಶೀಲಿಸಿ ತಮ್ಮ ಅಭಿಪ್ರಾಯಗಳನ್ನು ಹೊರಗೆಡವಬೇಕು. ಜೊತೆಗೆ ತಜ್ಞರು ಅದನ್ನು ಪರಿಶೀಲಿಸಿ ಅವುಗಳ ಕಾಲಮಾಪನ, ಸ್ಥಳದ ಐತಿಹ್ಯದ ಅಧ್ಯಯನ ನಡೆಸಬೇಕು.

—ದಿನೇಶ್,
ಚಿಕ್ಕಮಗಳೂರು.

ಕಾವಡಿ-ಶಾನುವಳ್ಳಿ ಬಸ್: ಜನತಾ ಸಮಿತಿ ಅಭಿನಂದನೆ

ಕೊಪ್ಪ: ಕಾವಡಿ–ಶಾನುವಳ್ಳಿ ಮಾರ್ಗವಾಗಿ ಮೇಗೂರು – ಮೃಗಾವಧೆ ಮಧ್ಯೆ ಮಾ. 1ರಿಂದ ಬಸ್ ಸಂಚಾರ ಆರಂಭಿಸಿ ಈ ಭಾಗದ ಹತ್ತಾರು ಹಳ್ಳಿಗಳವರಿಗೆ ಅನುಕೂಲ ಮಾಡಿಕೊಟ್ಟದ್ದಕ್ಕಾಗಿ ಶಂಕರ್ ಕಂಪನಿಯವರನ್ನು ಅಭಿನಂದಿಸಿರುವ ಬಿಲಗದ್ದೆ ಗ್ರಾಮ ಜನತಾ ಪಕ್ಷದ ಸಮಿತಿಯು, ಇದೇ ಮಾರ್ಗವಾಗಿ ಬೆಳಿಗ್ಗೆ ಶೃಂಗೇರಿಯಿಂದ ಕೊಪ್ಪಕ್ಕೆ ಹೋಗುವಂತೆ ಇನ್ನೊಂದು ಬಸ್ ವ್ಯವಸ್ಥೆ ಮಾಡುವಂತೆ ಕೋರಿದೆ.

ಸೇತುವೆ ಮಗ್ಗುಲು ಕೊರೆತ

ಬಿಲಗದ್ದೆ: ಇಲ್ಲಿಗೆ ಸಮೀಪದ ಬೆಣಿ ಎಂಬಲ್ಲಿ ಕಾಲು ಸೇತುವೆ ದಾಟುವಲ್ಲಿ ಹಳ್ಳದ ಮಗ್ಗುಲುಗಳು ಕೊರೆದು ಹೋಗಿದ್ದು ಈ ದಾರಿಯಾಗಿ ತಿರುಗಾಡುವ ನೂರಾರು ಜನರಲ್ಲಿ ಅಕಸ್ಮಾತ್ ಯಾರಿಗಾದರೂ ಪ್ರಾಣಾಪಾಯವಾದರೆ ಯಾರು ಹೊಣೆ? ಎಂದು ಕೇಳಿದ್ದಾರೆ ಕಾನಳಿ ಲಕ್ಷ್ಮೀನಾರಾಯಣಪ್ಪ.

ನಿವೃತ್ತ ನೌಕರರ ಸಂಘದ ನೂತನ ಪದಾಧಿಕಾರಿಗಳು

ಕೊಪ್ಪ: ರಾಜ್ಯ ನಿವೃತ್ತ ನೌಕರರ ಸಂಘದ ಕೊಪ್ಪ–ಶೃಂಗೇರಿ ಘಟಕದ ಸರ್ವ ಸದಸ್ಯರ ಸಭೆ ಮಾ. 23 ರಂದು ಉಪಾಧ್ಯಕ್ಷ ಕೆ.ಎಂ. ನರಸಿಂಹಯ್ಯನವರ ಅಧ್ಯಕ್ಷತೆಯಲ್ಲಿ ನಡೆದು, ಸದಸ್ಯರ ಹಿತಾಸಕ್ತಿಯ ಕೆಲವು ತೀರ್ಮಾನಗಳನ್ನು ಕೈಗೊಳ್ಳಲಾಯ್ತು.

ನೂತನ ಸಾಲಿಗೆ ಈ ಕೆಳಕಂಡವರು ಪದಾಧಿಕಾರಿಗಳಾಗಿ ಸರ್ವಾನುಮತದಿಂದ ಚುನಾಯಿತರಾದರು: ಕೆ. ಎಂ. ನರಸಿಂಹಯ್ಯ, ಕೊಪ್ಪ (ಅಧ್ಯಕ್ಷರು), ಎಸ್. ಮಂಜುನಾಥ್, ಶೃಂಗೇರಿ(ಉಪಾಧ್ಯಕ್ಷರು), ಜಿ.ಕೆ. ಹಿರಿಯಣ್ಣಯ್ಯ, ಕೊಪ್ಪ (ಕಾರ್ಯದರ್ಶಿ), ಎಸ್.ಹೆಚ್. ಶೇಷಾದ್ರಿ (ಸಹಕಾರ್ಯದರ್ಶಿ) ಕೆ.ಎ. ಪಟವರ್ಧನ್ (ಖಜಾಂಚಿ), ವೈ. ಎಸ್. ಸುಬ್ಬರಾವ್ (ಲೆಕ್ಕ ಪರಿಶೋಧಕರು) ಮತ್ತು 16 ಜನ ಸದಸ್ಯರು.

ಕೊಪ್ಪತಾ|| ಕಾಂ||ಅಧ್ಯಕ್ಷರಾಗಿ ವಿಜಯ ಅಜಿಲ

ಕೊಪ್ಪ: ಇಲ್ಲಿ. ಮಾ. 16ರಂದು ಸಂಸತ್ಸದಸ್ಯೆ ಡಿ. ಕೆ. ತಾರಾದೇವಿಯವರ ಸಮಕ್ಷಮ ನಡೆದ ತಾ|| ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಮಾಜಿ ಖಜಾಂಚಿ ವಿಜಯ ಅಜಿಲ ಅವರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಸಮುದಾಯ ಮಾರ್ಗದರ್ಶಿಗಳಿಂದ ಕುಟುಂಬ ಯೋಜನೆ ಶಿಬಿರ

ಕೊಪ್ಪ: ಇಲ್ಲಿನ ಸರ್ಕಾರಿ ಆಸ್ಪತ್ರೆಯಲ್ಲಿ ಮಾ. 27ರಂದು ಸಮುದಾಯ ಆರೋಗ್ಯ ಮಾರ್ಗದರ್ಶಿಗಳ ಪ್ರಯತ್ನದಿಂದ ಹಾಗೂ ಸ್ಥಳೀಯ ವೈದ್ಯಾಧಿಕಾರಿಗಳು ಮತ್ತು ಅವರ ಸಿಬ್ಬಂದಿಯ ನೆರವಿನೊಂದಿಗೆ 57 ಜನರಿಗೆ ಉದರ ದರ್ಶಕ ಸಂತಾನಹರಣ ಶಸ್ತ್ರ ಚಿಕಿತ್ಸೆಯನ್ನು ನಡೆಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಉಪ ನಿರ್ದೇಶಕರು, ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಹಾಜರಿದ್ದರಲ್ಲದೆ, ತಹಸೀಲ್ದಾರರು ಚಿಕಿತ್ಸೆ ಪಡೆದವರಿಗೆ ಪಾತ್ರೆಗಳನ್ನು ನೀಡಿದರು.

ಆರೋಗ್ಯ ಇಲಾಖೆಯ ಕಾರ್ಯಕರ್ತರಿಗೆ ಪೂರಕವಾಗಿ ಹಳ್ಳಿಗಳಲ್ಲಿ ಮಾಸಿಕ ಕೇವಲ 50 ರೂ. ಗೌರವ ಧನದೊಂದಿಗೆ ಕೆಲಸ ಮಾಡುತ್ತಿರುವ ಸ್ಥಳೀಯರಾದ ಈ ಸಮುದಾಯ ಆರೋಗ್ಯ ಮಾರ್ಗದರ್ಶಿಗಳ ನೇತೃತ್ವದಲ್ಲಿ ಕುಟುಂಬ ಯೋಜನೆ ಶಸ್ತ್ರ ಚಿಕಿತ್ಸಾ ಶಿಬಿರವೊಂದು ನಡೆದಿರುವುದು ರಾಜ್ಯದಲ್ಲೇ ಪ್ರಥಮವೆನ್ನಲಾಗಿದೆ.

ರೇಷ್ಮೆ ನಿರುಪಯುಕ್ತ?

ಕೊಪ್ಪ: ಪ.ಲಿನಾಡಿನ ಹವಾಮಾನಕ್ಕೆ ರೇಷ್ಮೆ ಅಷ್ಟು ಉಪಯುಕ್ತವಲ್ಲವೆಂದೂ, ರೇಷ್ಮೆಯ ನಾಲ್ಕೈದು ತಿಂಗಳು ಬೆಳೆ ಕೈಗೆ ಬರುವ ಮೊದಲೇ ಇಲ್ಲಿ ಏನೂ ಕೆಲಸವಿರುವುದಿಲ್ಲವೆಂದೂ ಸಚಿವರು ಅಭಿಪ್ರಾಯಪಟ್ಟಿದ್ದಾರೆನ್ನಲಾಗಿದೆ. ಇದರ ಫಲವಾಗಿ ಅವರು ತಮ್ಮ ಕ್ಷೇತ್ರದಿಂದಲೇ ರೇಷ್ಮೆ ಇಲಾಖೆಯನ್ನು ಮುಚ್ಚಿಸುವಂತೆ ಸರ್ಕಾರಕ್ಕೆ ಶಿಫಾರ್ಸು ಮಾಡುವ ಸಾಧ್ಯತೆ ಕೂಡ ಇರಬಹುದೆಂದು ಶಂಕಿಸಲಾಗಿದೆ.

ಬರ ಪರಿಹಾರಕ್ಕೆ ನ.ರಾ.ಪುರಜೇಸೀಸ್ ಕೊಡುಗೆ

ನ. ರಾ. ಪುರ: ಇಲ್ಲಿನ ಜೇಸೀಸ್ ಸಂಸ್ಥೆಯವರು ಬರ ಪರಿಹಾರಕ್ಕಾಗಿ "ಪ್ರತಿ ಮನೆಯಿಂದ ಒಂದು ವಾರದ ಹಿಡಿ ಅಕ್ಕಿ ಮತ್ತು ಒಂದು ರೂ. ಕಾಣಿಕೆ ಸಂಗ್ರಹ" ಕಾರ್ಯಕ್ರಮ ನಡೆಸಿ, ಐದೂಕಾಲು ಕ್ವಿಂ. ಅಕ್ಕಿ ಮತ್ತು 662 ರೂ. ಹಣ ಸಂಗ್ರಹಿಸಿದರು.

ಅಕ್ಕಿಯನ್ನು ಜಿಲ್ಲಾ ಕೇಂದ್ರದ ಮೂಲಕ ಬರ ಪರಿಹಾರ ಶಿಬಿರಕ್ಕೂ ಹಣವನ್ನು ರಾಜ್ಯ ಜೇಸೀಸ್ ಅಧ್ಯಕ್ಷರ ಮೂಲಕ ಮುಖ್ಯಮಂತ್ರಿಗಳ ಬರ ಪರಿಹಾರ ನಿಧಿಗೂ ಕಳಿಸಲಾಯಿತು. ಈ ಕಾರ್ಯಕ್ರಮದಲ್ಲಿ ಸಹಕರಿಸಿದ ನಾಗರೀಕರಿಗೆ ಅಧ್ಯಕ್ಷ ಬಿ.ವಿ. ಕಾಮತ್ ಧನ್ಯವಾದ ಸಲ್ಲಿಸಿದ್ದಾರೆ.

ದ್ವಿಚಕ್ರ ವಾಹನದ ಡಿಕ್ಕಿ ಶಂಕೆ: ಹಂದಿಗೋಡು ವೆಂಕಟರಾವ್ ನಿಧನ

ಕೊಪ್ಪ: ಇಲ್ಲಿಗೆ ಸಮೀಪದ ಹಂದಿಗೋಡಿನ ವಯೋವೃದ್ಧ ಕೃಷಿಕರಾದ ಬಿ. ಎಸ್. ವೆಂಕಟರಾವ್ ಮಾ. 29ರ ರಾತ್ರಿ ತಮ್ಮ ಮನೆಯ ಸಮೀಪ ಹೋಗುತ್ತಿದ್ದಾಗ ಯಾವುದೋ ವಾಹನವೊಂದು ತಗುಲಿ ಕೆಳಗೆ ಬಿದ್ದು, ಕಲ್ಲಿಗೆ ತಲೆ ಬಡಿದು ಸ್ಥಳದಲ್ಲೇ ಮೃತಪಟ್ಟರು.

ಅವರ ಕಾಲಿನ ಮೇಲೆ ಆದ ತರಚಿದ ಗಾಯದಿಂದ, ಯಾವುದೋ ದ್ವಿಚಕ್ರ ವಾಹನವೊಂದು ಎದುರಿಂದ ಅವರಿಗೆ ಬಡಿದು ಅವರನ್ನು ಬೀಳಿಸಿರಬೇಕೆಂದು ಶಂಕಿಸಲಾಗಿದೆ. ಇಳಿಜಾರಿನ ಈ ರಸ್ತೆಯಲ್ಲಿ ಕತ್ತಲ್ಲಲ್ಲಿ ಸೈಕಲ್‌ಗಳು ಬಹು ವೇಗವಾಗಿ ಹೋಗುವುದು ಸಾಮಾನ್ಯವಾಗಿದ್ದು, ಈ ಹಿಂದೊಮ್ಮೆ ಒಂದು ಸೈಕಲ್ ಡಿಕ್ಕಿ ಹೊಡೆದ ಬಗ್ಗೆ ವೆಂಕಟರಾವ್ ಅವರು ದೂರು ನೀಡಿದ್ದರು.

ಬಹಳ ಕಷ್ಟಸಹಿಷ್ಣು, ಪ್ರಾಮಾಣಿಕತೆಯ, ಜನಾನುರಾಗಿ ವ್ಯಕ್ತಿಯಾಗಿದ್ದ ಅವರು ಪತ್ನಿ, ಇಬ್ಬರು ಪುತ್ರರು ಮತ್ತು ಎಂಟು ಮಂದಿ ಪುತ್ರಿಯರನ್ನು ಅಗಲಿದ್ದಾರೆ. ಅವರಿಗೆ 74 ವರ್ಷ ವಯಸ್ಸಾಗಿತ್ತು.

ಮುಂಡಿಗೆಮನೆ, ಬಚ್ಚಣಿಗೆ ಹಳ್ಳಗಳಿಗೆ ಸೇತುವೆ

ಬೊವ್ವಾಪುರ: ಈ ಗ್ರಾಮದ ಮುಂಡಿಗೆಮನೆ ಮತ್ತು ಬಚ್ಚಣಿಗೆಗಳ ಹಳ್ಳಗಳಿಗೆ ಈ ವರ್ಷ ಸೇತುವೆಗಳನ್ನು ನಿರ್ಮಿಸಲಾಗುವುದೆಂದು ಗೋಣಿಂದ ಗೌಡರು ತಿಳಿಸಿದ್ದಾರೆ.

ಹಿರೇಕೊಡಿಗೆಯಲ್ಲಿ 20 ಸಾವಿರ ರೂ. ವೆಚ್ಚದಲ್ಲಿ ನಿರ್ಮಿಸಲಾದ ಅಂಗನವಾಡಿ ಕಟ್ಟಡ ಉದ್ಘಾಟಿಸಿ ಅವರು ಮಾತಾಡುತ್ತಿದ್ದರು. ಈ ಸಮಾರಂಭದಲ್ಲಿ ತಾ|| ಜನತಾ ಅಧ್ಯಕ್ಷ ಎಲ್. ವಿ. ಆನಂದಮಸುಬ್ಬಟ್ಟ ಅಧ್ಯಕ್ಷತೆ ವಹಿಸಿದ್ದು, ಡಿ.ಟಿ. ಚಂದ್ರಶೇಖರ್ ಮುಖ್ಯ ಅತಿಥಿಯಾಗಿದ್ದರು.

ಮೇಲುಬೆಳ್ಳಿ ರಸ್ತೆ ಪೂರ್ಣ ರಿಪೇರಿಗೆ ಮನವಿ

ಮೇಲುಬೆಳ್ಳಿ: ಹರಿಹರಪುರ–ಶೃಂಗೇರಿ ರಸ್ತೆಯಿಂದ ಈ ಗ್ರಾಮದ ಮೂಲಕ ಬಿಲಗದ್ದೆಗೆ ಸಂಪರ್ಕ ಕಲ್ಪಿಸುವ ಸುಮಾರು 5 ಕಿ.ಮೀ. ರಸ್ತೆಯಲ್ಲಿ ಈಗ ಒಂದು–ಒಂದೂವರೆ ಕಿ.ಮೀ ನಷ್ಟು ಮಾತ್ರ ಹೊಸದಾಗಿ ಜಲ್ಲಿ ಹಾಕಿ ರಿಪೇರಿ ಮಾಡಲಾಗಿದ್ದು ಉಳಿದ ಭಾಗಕ್ಕೆ ಇನ್ನೂ ರಿಪೇರಿ ಆಗಿಲ್ಲ. ರಸ್ತೆ ಬಹಳ ದುಸ್ಥಿತಿಯಲ್ಲಿದ್ದು ಪೂರ್ತಿ ರಸ್ತೆಗೆ ಇದೇ ರೀತಿ ದುರಸ್ತಿ ಮಾಡಬೇಕೆಂದು ಗ್ರಾಮಸ್ಥರು ಮನವಿ ಮಾಡಿದ್ದಾರೆ.

(ದುರಸ್ತಿ ಆಗಿ ಬಸ್ ಓಡಾಡುವ ವ್ಯವಸ್ಥೆ ಆಗಲೆಂದೂ ಗ್ರಾಮಸ್ಥರು ಅಪೇಕ್ಷಿಸ ತೊಡಗಿದ್ದಾರೆ.)

ನಿಧನ

ಮೈಸೂರು: ಗುಡ್ಡೇತೋಟ ಅರಳಿಕಟ್ಟೆಯ ಎ. ಆರ್. ನಾಗೇಶರಾವ್ ಅವರು ಕೆಲಕಾಲದ ಅಸ್ವಸ್ಥತೆಯ ನಂತರ ಮಾ. 23 ರಂದು ಇಲ್ಲಿ ನಿಧನರಾದರು. ಅವರಿಗೆ 63 ವರ್ಷ ವಯಸ್ಸಾಗಿತ್ತು. ಇಲ್ಲಿ ನೆಲೆಸಿ ಸಮೀಪದ ಕಡಕೊಳದಲ್ಲಿ ಜಮೀನು ಕೊಂಡು ಸಾಗುವಳಿ ಮಾಡಿಸುತ್ತಿದ್ದ ಅವರು ಪತ್ನಿ, ಪುತ್ರರು ಮತ್ತು ಅಪಾರ ಬಂಧುವರ್ಗವನ್ನು ಅಗಲಿದ್ದಾರೆ.

ಸಕಲೇಶಪುರ ಏಲಕ್ಕಿ ಧಾರಣೆ

ವ್ಯಾಪಾರದ ತಾರೀಖು	ಗರಿಷ್ಠ ಧಾರಣೆ	ಸರಾಸರಿ ಧಾರಣೆ
17.3.86	150	92
18.3.86	160	107
20.3.86	186	83
21.3.86	183	94

ಶಿವಮೊಗ್ಗ ಅಡಿಕೆ ಪೇಟೆ

ತಾರೀಖು: 26.3.86.

ಸರಕು :	2826–3163
ಬೆಟ್ಟೆ :	1825–2106
ಗೊರಬಲು :	1325–1676

ಡ್ರಾ ಫಲಿತಾಂಶ

ಬಸರಿಕಟ್ಟೆ ಶ್ರೀ ಜನಾರ್ದನ ಸ್ವಾಮಿ ದೇವಸ್ಥಾನದ ಸಹಾಯಾರ್ಥ ನಡೆದ ಅದೃಷ್ಟ ಬಹುಮಾನ ಯೋಜನೆ ಡ್ರಾ ಫಲಿತಾಂಶ:

I ಹೀರೋ ಸೈಕಲ್: ನಂ. 2053,
II ರೇಡಿಯೋ: ನಂ. 0602,
III ಗೋಡೆ ಗಡಿಯಾರ: ನಂ. 0803.

ಸಮಾಧಾನಕರ ಬಹುಮಾನಗಳು: 1374, 3999, 4761, 3188, ಮತ್ತು 1689.

ದಿನಾಂಕ 17–4–86ರ ಒಳಗೆ ಬಹುಮಾನವನ್ನು ಪಡೆದುಕೊಳ್ಳಬೇಕಾಗಿ ಕೋರಲಾಗಿದೆ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ : ಸಿರಿಮನೆ ನಾಗರಾಜ್, ಅಚ್ಚು: ದೀಪಟಿಗ ಅಚ್ಚು ಕೂಟ, ಕೊಪ್ಪ.